

# ದುಬಾರಿ ಶೂ!

ಅಕಸ್ಮಾತ್ ಯಾರಾದರೂ 'ನೀನು ನನ್ನ ಎಕ್ಕಡಕ್ಕೆ ಸಮ' ಅಂತಾ ಬೈದರೆ ಬೇಜಾರು ಮಾಡಿಕೊಳ್ಳೋ ಹಾಗಿಲ್ಲ! ಬದಲಾಗಿ ಖುಷಿಪಡಬಹುದು! ಏಕೆಂದರೆ 15.1 ಮಿಲಿಯನ್ ಡಾಲರ್ ಅಂದರೆ ಸುಮಾರು 99,06,35,500 ರೂಪಾಯಿ ಬೆಲೆಯುಳ್ಳ ಪಾದರಕ್ಷೆ ಇಲ್ಲಿದೆ. ಇದನ್ನು ಇತ್ತೀಚೆಗೆ ಇಂಗ್ಲೆಂಡ್‌ನಲ್ಲಿ ಅನಾವರಣಗೊಳಿಸಲಾಗಿದೆ.

ಪ್ರಪಂಚದಲ್ಲೇ ಅತ್ಯಂತ ಬೆಲೆಯುಳ್ಳ ಶೂ ಎಂಬ ಖ್ಯಾತಿ ಗಳಿಸಿರುವ ಈ ಪಾದರಕ್ಷೆ ನೋಡಿದ್ದೀರಾ? ಇವುಗಳನ್ನು ಸೃಷ್ಟಿಸುವ ಐಡಿಯಾ ಬಂದದ್ದು ಇಂಗ್ಲೆಂಡ್‌ನ ವಿನ್ಯಾಸಕಾರ್ತಿ ಡೆಬ್ಬಿ ವಿಂಗ್ಹ್ಯಾಂಗೆ. ಈಕೆ ಸೆಲೆಬ್ರಿಟಿಗಳಿಗೆ, ರಾಯಲ್ ಮನೆತನದವರಿಗೆ, ಶ್ರೀಮಂತರಿಗೆ ಭವ್ಯವಾದ ಹಾಗೂ ಐಷಾರಾಮಿ ವಸ್ತುಗಳನ್ನು ತಯಾರಿಸಿಕೊಡುವುದಕ್ಕೆ ಪ್ರಸಿದ್ಧಿ ಪಡೆದಿದ್ದಾಳೆ.

ಕಲಾತ್ಮಕ ಕುಸುರಿ ಕೆಲಸದ ಪಾದರಕ್ಷೆ ತಯಾರಿಕೆಗೆ ಹೆಸರು ಗಳಿಸಿರುವ ಕ್ಯಾಂಪ್ ಬೆಲ್ ಎಂಬಾತ ಈ ಶೂ ಗಳನ್ನು ಹೊಲಿದು ಸಿದ್ಧಪಡಿಸಿದ್ದಾನೆ. ಪರಿಪೂರ್ಣ ಸಮಸೂತ್ರವುಳ್ಳ ಈ ಶೂ ಗಳಲ್ಲಿ ಅತ್ಯಂತ ವಿರಳವಾಗಿರುವ ಗುಲಾಬಿ ಮತ್ತು ನೀಲಿ ವಜ್ರಗಳನ್ನು ಅಳವಡಿಸಲಾಗಿದೆ. ಬೆಲೆಬಾಳುವ ಈ ವಜ್ರಗಳ ಮೊತ್ತವೇ 9,23,54,250 ರೂಗಳಿಗಿಂತ ಜಾಸ್ತಿ. ಶೂಗಳ ಮೇಲ್ಭಾಗದಲ್ಲಿ ನಾಲ್ಕು ಹಾಗೂ ಮೂರು ಕ್ಯಾರೆಟ್‌ನ ಲವಲೇಶವೂ ಕುಂದಿಲ್ಲದ ವಜ್ರಗಳನ್ನು ಬಳಸಲಾಗಿದ್ದು ತುಪ್ಪುಳದ ಜೊತೆಗೆ ಇತರೇ 1000 ವಜ್ರಗಳನ್ನು ಹುದುಗಿಸಲು ಸಾಂಪ್ರದಾಯಿಕ ಕೇಕ್ ಅಲಂಕರಣದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ.

ಎಲ್ಲಾ ವಜ್ರಗಳನ್ನು ಪ್ಲಾಟಿನಂ ಲೋಹದಲ್ಲಿ ಕೂರಿಸಿ, ಶೂ ವಿನ ತಳಭಾಗಕ್ಕೆ ಮಾತ್ರ ಗಟ್ಟಿ ಚಿನ್ನವನ್ನು ಉಪಯೋಗಿಸಲಾಗಿದೆಯಂತೆ. ನೂರಾರು ಗಂಟೆಗಳನ್ನು ವ್ಯಯಿಸಿ 18 ಕ್ಯಾರೆಟ್ ಚಿನ್ನದ ದಾರದಲ್ಲಿ ಕೈಯಿಂದಲೇ ಇದನ್ನು ಹೊಲಿದು ಸಿದ್ಧಪಡಿಸಲಾಗಿದೆ. ಚರ್ಮ ಲೇಪನ ಸಂಸ್ಕರಣವನ್ನು ಸಹ 24



ಕ್ಯಾರೆಟ್ ಗೋಲ್ಡ್ ಪೇಂಟ್ ನಿಂದ ಮಾಡಲಾಗಿದ್ದು, ವಜ್ರಗಳನ್ನೊಳಗೊಂಡಿರುವ ಚರ್ಮದಿಂದ ಮಾಡಿರುವ ಅರೇಬಿಯನ್ ಜಾಸ್ಮಿನ್ ಹೂಗಳನ್ನು ಶೂಗಳ ಅಲಂಕಾರಕ್ಕಾಗಿ ಬಳಸಲಾಗಿದೆ. ಪ್ರೀತಿ ಪಾತ್ರರಿಗೆ ಹುಟ್ಟುಹಬ್ಬದ ಉಡುಗೊರೆ ನೀಡುವ ಸಲುವಾಗಿ ವಿಶಿಷ್ಟವಾದ ವಜ್ರಖಚಿತ ಶೂ ಗಳ ಬೇಡಿಕೆಯ ಮೇರೆಗೆ ಇದನ್ನು ಸಿದ್ಧಪಡಿಸಲಾಗಿದೆಯಂತೆ.

**■ ವಿನಯ ಕುಮಾರ್ ಬಿ.ಹೆಚ್.**